**ವಿದೇಶೀ ವಿನಿಮಯ ನಿರ್ವಹಣೆ ಅಧಿನಿಯಮ ೧೯೯೯–ವಿದೇಶ ಪ್ರವಾಸ**
**ಎ.ಪಿ. (ಡಿಐಆರ್ ಶ್ರೇಣಿ) ಸುತ್ತೋಲೆ ಸಂಖ್ಯೆ ೧೯ (ಅಕ್ಟೋಬರ್ ೩೦, ೨೦೦೦)**
**ಭಾರತೀಯ ರಿಸರ್ವ್ ಬ್ಯಾಂಕು**
**ವಿದೇಶೀ ವಿನಿಮಯ ನಿಯಂತ್ರಣ ಇಲಾಖೆ**
**ಕೇಂದ್ರ ಕಚೇರಿ**
**ಮುಂಬೈ–೪೦೦೦೦೧**

ಎ.ಪಿ. (ಡಿಐಆರ್ ಶ್ರೇಣಿ) ಸುತ್ತೋಲೆ ಸಂಖ್ಯೆ–೧೯ **ಅಕ್ಟೋಬರ್ ೩೦, ೨೦೦೦**

ವಿದೇಶೀ ವಿನಿಮಯ ವ್ಯವಹಾರದಲ್ಲಿ ತೊಡಗಿರುವ ಎಲ್ಲ ಅಧಿಕೃತ ವ್ಯಾಪಾರಿಗಳಿಗೆ

ಮಾನ್ಯರೇ,

**ವಿದೇಶೀ ವಿನಿಮಯ ನಿರ್ವಹಣೆ ಕಾಯಿದೆ, ೧೯೯೯– ವಿದೇಶ ಪ್ರವಾಸ**

ವಿದೇಶೀ ವಿನಿಮಯ ನಿರ್ವಹಣೆ (ಚಾಲ್ತಿ ಖಾತೆ ವ್ಯವಹಾರಗಳು) ನಿಯಮಗಳು, ೨೦೦೦ ನ್ನು ಅಧಿಸೂಚಿಸುವ ಭಾರತ ಸರ್ಕಾರದ ಅಧಿಸೂಚನೆ ಸಂಖ್ಯೆ ಜಿಎಸ್ಆರ್. ೩೮೧ (ಇ) ದಿನಾಂಕ ೩ ನೇ ಮೇ ೨೦೦೦ ದ ಕಡೆಗೆ ಅಧಿಕೃತ ವ್ಯಾಪಾರಿಗಳ ಗಮನವನ್ನು ಸೆಳೆಯಲಾಗಿದೆ. ಈ ಅಧಿಸೂಚನೆಯನ್ವಯ ಕೆಲವು ಚಾಲ್ತಿ ಖಾತೆ ವ್ಯವಹಾರಗಳಿಗೆ ವಿದೇಶೀ ವಿನಿಮಯ ತೆಗೆಯುವುದನ್ನು ನಿಷೇಧಿಸಲಾಗಿದೆ ಮತ್ತು ಇತರ ಕೆಲವು ವ್ಯವಹಾರಗಳ ಮೇಲೆ ನಿರ್ಬಂಧಗಳನ್ನು ಹೇರಲಾಗಿದೆ. ನಿಯಮ ೫ರ ಅನ್ವಯ ಅಧಿಸೂಚನೆಯ IIIನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ವ್ಯವಹಾರಗಳಿಗೆ ರಿಸರ್ವ್ ಬ್ಯಾಂಕ್‌ನ ಪೂರ್ವ ಅನುಮೋದನೆ ಪಡೆಯಬೇಕಾಗುತ್ತದೆ. ಅದರಂತೆ, ವಿದೇಶ ಪ್ರವಾಸಕ್ಕೆ ವಿದೇಶೀ ವಿನಿಮಯವನ್ನು ಬಿಡುಗಡೆ ಮಾಡುವುದಕ್ಕಾಗಿಯ ಅರ್ಜಿಗಳಿಗೆ ಸಂಬಂಧಿಸಿದಂತೆ ಈ ಸುತ್ತೋಲೆಯ ಅನುಬಂಧದಲ್ಲಿ ಒಳಗೊಂಡಿರುವ ನಿರ್ದೇಶನಗಳನ್ನು ಅಧಿಕೃತ ವ್ಯಾಪಾರಿಗಳು ಪಾಲಿಸಬೇಕು.

೨. ಅನುಬಂಧದಲ್ಲಿ ಒಳಗೊಂಡಿರುವ ನಿರ್ದೇಶನಗಳನ್ನು, ಮೇಲೆ ಉಲ್ಲೇಖಿಸಿದ ದಿನಾಂಕ ೩ನೇ ಮೇ ೨೦೦೦ ದ ಅಧಿಸೂಚನೆ ಮೂಲಕ ಭಾರತ ಸರ್ಕಾರದ ಹಣಕಾಸು ಮಂತ್ರಾಲಯವು ಅಧಿಸೂಚಿಸಿರುವ ನಿಯಮಗಳೊಂದಿಗೆ ಓದಿಕೊಳ್ಳಬೇಕೆಂದು ಸ್ಪಷ್ಟಪಡಿಸಲಾಗಿದೆ

೩. ಭಾರತ ಸರ್ಕಾರದ ಅಧಿಸೂಚನೆ ಸಂಖ್ಯೆ ಜಿಎಸ್ಆರ್. ೩೮೧ (ಇ) ದಿನಾಂಕ ೩ನೇ ಮೇ ೨೦೦೦ದ ರ (೨) ನೇ ನಿಯಮದ (ಬಿ) ಖಂಡದ ಅನ್ವಯ " ಹಣ ತೆಗೆಯುವುದು " ಎಂಬುದರಲ್ಲಿ ಅಂತರ ರಾಷ್ಟ್ರೀಯ ಕ್ರೆಡಿಟ್ ಕಾರ್ಡ್‌ಗಳು, ಅಂತರರಾಷ್ಟ್ರೀಯ ಡೆಬಿಟ್ ಕಾರ್ಡ್‌ಗಳು, ಎಟಿಎಂ ಕಾರ್ಡುಗಳು ಮುಂತಾದವುಗಳ ಬಳಕೆಯೂ ಸೇರುತ್ತದೆ. ಆದ್ದರಿಂದ, ಈ ಸಾಧನಗಳ ಬಳಕೆಯು ಸಹ ಅಧಿಸೂಚನೆಯಲ್ಲಿ ವಿಧಿಸಿರುವ ನಿರ್ಬಂಧಗಳಿಗೆ ಒಳಪಡುತ್ತದೆ. ಅಲ್ಲದೆ, ವಿದೇಶೀ ವಿನಿಮಯ ನಿರ್ವಹಣೆ ಕಾಯಿದೆ, ೧೯೯೯ರ ೨ನೇ ಪ್ರಕರಣದ (ಹೆಚ್) ಖಂಡದ ಅನ್ವಯ " ಕರೆನ್ಸಿ " ಯಲ್ಲಿ ಇತರೆಯವುಗಳೊಂದಿಗೆ ಅಂತರರಾಷ್ಟ್ರೀಯ ಕ್ರೆಡಿಟ್ ಕಾರ್ಡುಗಳು ಸೇರುತ್ತವೆ. ರಿಸರ್ವ್ ಬ್ಯಾಂಕು ತನ್ನ ಅಧಿಸೂಚನೆ ಸಂಖ್ಯೆ ಎಫ್ಇಎಂಎ ೧೫/ಆರ್ ಬಿ–೨೦೦೦ ದಿನಾಂಕ ೩ನೇ ಮೇ ೨೦೦೦ ದ ಮೂಲಕ ಎಟಿಎಂ ಕಾರ್ಡುಗಳು ಮತ್ತು ಡೆಬಿಟ್ ಕಾರ್ಡುಗಳನ್ನು ಕೂಡ " ಕರೆನ್ಸಿ" ಎಂದು ಅಧಿಸೂಚಿಸಿದೆ. ಅದರಂತೆ, ಕ್ರೆಡಿಟ್ ಕಾರ್ಡ್‌ಗಳು, ಎಟಿಎಂ ಕಾರ್ಡುಗಳು ಮತ್ತು ಡೆಬಿಟ್ ಕಾರ್ಡುಗಳು ಮುಂತಾದವುಗಳ ಮೂಲಕ ಮಾಡಿದ ಹಣ ಸಂದಾಯಗಳು ಕೇವಲ ವಿಭಿನ್ನ ವಿಧಾನಗಳ ಸಂದಾಯವಾಗಿದ್ದು, ಅಧಿನಿಯಮದ ಅಡಿಯಲ್ಲಿ ರಚಿಸಿದ ಎಲ್ಲ

ನಿಯಮಗಳು, ವಿನಿಯಮಗಳು ಮತ್ತು ನೀಡಿದ ನಿರ್ದೇಶನಗಳು ಕ್ರೆಡಿಟ್ ಕಾರ್ಡುಗಳು, ಎಟಿಎಂ ಕಾರ್ಡುಗಳು, ಡೆಬಿಟ್ ಕಾರ್ಡುಗಳು ಮುಂತಾದವುಗಳಿಗು ಸಹಾ ಅನ್ವಯಿಸುತ್ತವೆ.

೪. ಒಬ್ಬ ವ್ಯಕ್ತಿಯು ಖಾಸಗಿ ಭೇಟಿಯಲ್ಲದ ಬೇರೊಂದು ಉದ್ದೇಶಕ್ಕಾಗಿ ವಿದೇಶಕ್ಕೆ ಹೋಗುತ್ತಿರುವಲ್ಲಿ, ಪ್ರವಾಸಿಗರ ಪಾಸ್‌ಪೋರ್ಟ್ ಮೇಲೆ ಅಂಥ ಪ್ರಯಾಣಕ್ಕೆ ಮಾರಾಟ ಮಾಡಿದ ವಿದೇಶಿ ವಿನಿಮಯದ ಹಣವನ್ನು ಅಧಿಕೃತ ವ್ಯಾಪಾರಿಗಳು ಧೃಡಪಡಿಸುವುದು ಕಡ್ಡಾಯವೇನಲ್ಲ. ಆದರೆ, ಖಾಸಗಿ ಭೇಟಿಗೆ ವಿದೇಶೀ ವಿನಿಮಯವನ್ನು ಮಾರಾಟ ಮಾಡುವಲ್ಲಿ ಅಂದರೆ ಪ್ರವಾಸಿಗರು ಮೂಲ ಪ್ರವಾಸ ಕೋಟಾ (ಬಿಟಿಕ್ಯೂ) ಬಳಸಿಕೊಂಡಲ್ಲಿ ಪ್ರವಾಸಿಗಳ ಪಾಸ್‌ಪೋರ್ಟ್ ಮೇಲೆ ವಿದೇಶೀ ವಿನಿಮಯದ ಹಣವನ್ನು ಸ್ಪಷ್ಟವಾಗಿ ದೃಢಪಡಿಸಿ ಅಧಿಕೃತ ವ್ಯಾಪಾರಿಯ ಮೊಹರು, ದಿನಾಂಕ ಮತ್ತು ಸಹಿ ಹಾಕಿರಬೇಕು.

**೫. ಮುಂಗಡ ಹಣದ ರವಾನೆ**

ವಿದೇಶೀ ವಿನಿಮಯ ಬಿಡುಗಡೆ ಗ್ರಾಹ್ಯವಾಗುವಂಥ ಯಾವುದೇ ಚಾಲ್ತಿ ಖಾತೆ ವ್ಯವಹಾರಕ್ಕೆ ಮುಂಗಡ ಹಣ ರವಾನಿಸಲು ಅಧಿಕೃತ ವ್ಯಾಪಾರಿಗಳು ಅನುಮತಿಸಬಹುದು. ಆದರೆ ಮುಂಗಡ ಹಣ ರವಾನೆಯ ಮೊಬಲಗು ೨೫,೦೦೦ ಅಮೇರಿಕಾ ಡಾಲರ್ ಅಥವಾ ಅದಕ್ಕೆ ಸಮನಾದ ಮೊತ್ತವನ್ನು ಮೀರಬಾರದು. ಮೊಬಲಗು ೨೫,೦೦೦ ಅಮೇರಿಕಾ ಡಾಲರ್ ಅಥವಾ ಅದಕ್ಕೆ ಸಮನಾದ ಮೊತ್ತಕ್ಕಿಂತ ಹೆಚ್ಚಾದಲ್ಲಿ ಭಾರತ ಹೊರಗಿರುವ ಅಂತರರಾಷ್ಟ್ರೀಯ ಖ್ಯಾತಿಯ ಬ್ಯಾಂಕ್ ನಿಂದ ಖಾತರಿಯನ್ನು ಅಥವಾ ಭಾರತದಲ್ಲಿನ ಅಧಿಕೃತ ವ್ಯಾಪಾರಿಯಿಂದ ಖಾತರಿಯನ್ನು, ಸಾಗರೋತ್ತರ (ವಿದೇಶದಲ್ಲಿರುವ) ಫಲಾನುಭವಿಯಿಂದ ಪಡೆದುಕೊಳ್ಳತಕ್ಕದ್ದು. ಆದರೆ ಅಂಥ ಖಾತರಿಯನ್ನು ಭಾರತದ ಹೊರಗಿರುವ ಅಂತರ ರಾಷ್ಟ್ರೀಯ ಖ್ಯಾತಿಯ ಬ್ಯಾಂಕ್‌ನ ಪ್ರತಿ ಗ್ಯಾರಂಟಿಗೆ ಪ್ರತಿಯಾಗಿ ನೀಡಿರಬೇಕು. ಅಧಿಕೃತ ವ್ಯಾಪಾರಿಯು ಮುಂಗಡ ಹಣ ರವಾನೆಯ ಫಲಾನುಭವಿಯು ಭಾರತದಲ್ಲಿನ ಹಣ ರವಾನೆದಾರನೊಂದಿಗೆ ಮಾಡಿಕೊಂಡ ಕರಾರು ಅಥವಾ ಒಪ್ಪಂದದ ಅಡಿಯಲ್ಲಿ ತನ್ನ ಹೊಣೆಗಾರಿಕೆಗಳನ್ನು ಈಡೇರಿಸಿದ್ದಾನೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಅನುಸರಣಾ ಕ್ರಮವನ್ನು ಕೈಗೊಳ್ಳತಕ್ಕದ್ದು.

೬. ಈ ಸುತ್ತೋಲೆಯ ಅನುಬಂಧದಲ್ಲಿ ಒಳಗೊಂಡಿರುವ ನಿರ್ದೇಶನಗಳು ವಿದೇಶೀ ವಿನಿಮಯ ನಿಯಂತ್ರಣ ಕೈಪಿಡಿಯ (೧೯೯೩ರ ಆವೃತ್ತಿ) ಅಧ್ಯಾಯ ೮ ರ ಭಾಗ ಎ ಯಲ್ಲಿ ಮತ್ತು ಅದರ ೩,೩೩ ಮತ್ತು ೩೧ ನೇ ಅನುಬಂಧಗಳಲ್ಲಿ ಒಳಗೊಂಡಿರುವ ಸೂಚನೆಗಳನ್ನು ರದ್ದುಪಡಿಸುತ್ತದೆ.

೭. ಅಧಿಕೃತ ವ್ಯಾಪಾರಿಗಳು, ಸುತ್ತೋಲೆಯ ಅಂಶಗಳನ್ನು ತಮ್ಮ ಸಂಬಂಧಪಟ್ಟ ಘಟಕಗಳ ಗಮನಕ್ಕೆ ತರತಕ್ಕದ್ದು.

೮. ಈ ಸುತ್ತೋಲೆಯಲ್ಲಿ ಒಳಗೊಂಡಿರುವ ನಿರ್ದೇಶನಗಳನ್ನು ವಿದೇಶಿ ವಿನಿಮಯ ನಿರ್ವಹಣೆ ಅಧಿನಿಯಮ, ೧೯೯೯ (೧೯೯೯ರ ೪೨) ರ ೧೦ (೪) ನೇ ಪ್ರಕರಣದ ಮತ್ತು ೧೧(೧) ನೇ ಪ್ರಕರಣದ ಅಡಿಯಲ್ಲಿ ನೀಡಲಾಗಿದೆ. ಈ ನಿರ್ದೇಶನಗಳನ್ನು ಯಾವುದೇ ರೀತಿಯಲ್ಲಿ ಉಲ್ಲಂಘಿಸಿದರೆ ಅಥವಾ ಪಾಲಿಸದಿದ್ದರೆ ಅಧಿನಿಯಮದ ಅಡಿಯಲ್ಲಿ ಗೊತ್ತುಪಡಿಸಿರುವ ದಂಡಗಳಿಗೆ ಗುರಿಯಾಗಬೇಕಾಗುತ್ತದೆ.

ತಮ್ಮ ವಿಶ್ವಾಸಿ,

ಕೆ.ಜಿ. ಉದೇಶಿ
ಮುಖ್ಯ ಪ್ರಧಾನ ವ್ಯವಸ್ಥಾಪಕ.

**ಅನುಬಂಧ**

## ವಿದೇಶ ಪ್ರವಾಸ

### ಎ–೧ ಸಾಮಾನ್ಯ

ಭಾರತದ ನಿವಾಸಿಗಳಾಗಿರುವ ವ್ಯಕ್ತಿಗಳಿಗೆ ವಿದೇಶ ಪ್ರವಾಸಕ್ಕಾಗಿ ವಿದೇಶಿ ವಿನಿಮಯವನ್ನು ಬಿಡುಗಡೆ ಮಾಡುವುದಕ್ಕೆ ಅಧಿಕೃತ ವ್ಯಾಪಾರಿಗಳು ವಿದೇಶೀ ವಿನಿಮಯ ನಿರ್ವಹಣೆ ಕಾಯಿದೆ, ೧೯೯೯ರ ೫ನೇ ಪ್ರಕರಣದ ಅಡಿಯಲ್ಲಿ ಭಾರತ ಸರ್ಕಾರವು ರಚಿಸಿರುವ ನಿಯಮಗಳಿಂದ ಮಾರ್ಗದರ್ಶನ ಪಡೆಯತಕ್ಕದ್ದು. ಸರ್ಕಾರದ ಅಧಿಸೂಚನೆ ಸಂಖ್ಯೆ ಜಿಎಸ್‌ಆರ್. ೩೮೧ (೯) ದಿನಾಂಕ ೩ ನೇ ಮೇ ೨೦೦೦ ದ ೩ನೇ ನಿಯಮದ (ಬಿ) ಬಾಬಿನ ಅನ್ವಯ ನೇಪಾಳ, ಮತ್ತು ಭೂತಾನಕ್ಕೆ ಪ್ರವಾಸ ಮಾಡಲು ಯಾವುದೇ ವಿದೇಶಿ ವಿನಿಮಯ ಬಿಡುಗಡೆ ಗ್ರಾಹ್ಯವಾಗುವುದಿಲ್ಲ. ಅಧಿಸೂಚನೆಯ ೩೩ ನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವಂತೆ ಕೆಲವು ಮಿತಿಗಳನ್ನು ಮೀರಿ ವಿದೇಶೀ ವಿನಿಮಯವನ್ನು ಬಿಡುಗಡೆ ಮಾಡುವುದಕ್ಕೆ ರಿಸರ್ವ್ ಬ್ಯಾಂಕ್‌ನಿಂದ ಪೂರ್ವ ಅನುಮೋದನೆ ಪಡೆದುಕೊಳ್ಳಬೇಕು. ಸರ್ಕಾರಿ ಅಧಿಸೂಚನೆಯ ೩೩ ನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಮಿತಿಗಳನ್ನು ಮೀರಿ ವಿದೇಶೀ ವಿನಿಮಯ ಬಿಡುಗಡೆ ಮಾಡುವುದಕ್ಕೆ ಸಂಬಂಧಿಸಿದ ಅರ್ಜಿಗಳನ್ನು, ಅರ್ಜಿದಾರನು ಕಾರ್ಯ ನಿರ್ವಹಿಸುತ್ತಿರುವಂಥ/ ವಾಸವಾಗಿರುವಂಥ ಪ್ರದೇಶದ ಮೇಲೆ ಕಾರ್ಯವ್ಯಾಪ್ತಿ ಹೊಂದಿರುವಂಥ ವಿದೇಶೀ ವಿನಿಮಯ ನಿಯಂತ್ರಣ ಇಲಾಖೆಯ ಪ್ರಾದೇಶಿಕ ಕಚೇರಿಗೆ ಕಳುಹಿಸಿಕೊಡತಕ್ಕದ್ದು.

### ಎ–೨ ವಿನಿಮಯ ಮಾರಾಟ:

(ಎ) ರಿಸರ್ವ್ ಬ್ಯಾಂಕು/ ಭಾರತ ಸರ್ಕಾರವು ಅನುಮತಿ ಪತ್ರಗಳನ್ನು/ ಅನುಮೋದನೆ ಪತ್ರಗಳನ್ನು ನೀಡಿರುವಲ್ಲಿ ಅನುಮತಿ ಪತ್ರದಲ್ಲಿ/ ಅನುಮೋದನೆ ಪತ್ರದಲ್ಲಿ ತಿಳಿಸಿರುವ ಸಿಂಧುತ್ವದ ಅವಧಿಯೊಳಗೆ ವಿದೇಶೀ ವಿನಿಮಯವನ್ನು ಮಾರಾಟ ಮಾಡಬಹುದು ಮತ್ತು ಅನುಮತಿ ಪತ್ರದ/ ಮೂಲ ಅನುಮೋದನೆ ಪತ್ರದ ಹಿಂಬದಿಯಲ್ಲಿ ಮಾರಾಟವನ್ನು ನಮೂದಿಸಿ ದೃಢಪಡಿಸತಕ್ಕದ್ದು.

(ಬಿ) ಪ್ರವಾಸಿಯು ಖಾಸಗಿ ಭೇಟಿಯಲ್ಲದ ಉದ್ದೇಶಕ್ಕಾಗಿ ವಿದೇಶಕ್ಕೆ ಹೋಗುತ್ತಿರುವಲ್ಲಿ ವಿದೇಶ ಪ್ರವಾಸಕ್ಕೆ ಮಾರಾಟ ಮಾಡಿದ ವಿದೇಶೀ ವಿನಿಮಯವನ್ನು ಅಧಿಕೃತ ವ್ಯಾಪಾರಿಯು ಪ್ರವಾಸಿಯ ಪಾಸ್‌ಪೋರ್ಟ್ ಮೇಲೆ ನಮೂದು ಮಾಡುವ ಅಗತ್ಯವಿಲ್ಲ. ಖಾಸಗಿ ಭೇಟಿಗೆ ವಿದೇಶೀ ವಿನಿಮಯವನ್ನು ಮಾರಾಟ ಮಾಡಿದಲ್ಲೆಲ್ಲ ಪ್ರವಾಸಿಯ ಪಾಸ್ ಪೋರ್ಟ್‌ನ ಮೇಲೆ ಅದನ್ನು ನಮೂದು ಮಾಡಿ ಅಧಿಕೃತ ವ್ಯಾಪಾರಿಯ ಮೊಹರು, ದಿನಾಂಕ ಮತ್ತು ಸಹಿ ಮಾಡಿ ದೃಢೀಕರಿಸತಕ್ಕದ್ದು.

**ಟಿಪ್ಪಣಿ:**

ಎ. ಪ್ರವಾಸಿಯು ಕೋರಿದರೆ, ವಿದೇಶಕ್ಕೆ ಖಾಸಗಿ ಭೇಟಿಯನ್ನು ಹೊರತುಪಡಿಸಿದ ಪ್ರವಾಸಕ್ಕಾಗಿ ಮಾರಾಟ ಮಾಡಿದ ವಿದೇಶೀ ವಿನಿಮಯದ ವಿವರಗಳನ್ನು ಅಧಿಕೃತ ವ್ಯಾಪಾರಿಗಳು, ನಮೂದು ಮಾಡಿ ತಮ್ಮ ಮೊಹರು ಮತ್ತು ಸಹಿ ಹಾಕತಕ್ಕದ್ದು.

ಬಿ. ಪಾಲಕನ ಪಾಸ್‌ಪೋರ್ಟ್ ಮೇಲೆ ಮಗು ಪ್ರಯಾಣ ಮಾಡುತ್ತಿರುವಲ್ಲಿ ಜಂಟಿ ಪಾಸ್‌ಪೋರ್ಟ್ ಮೇಲೆ ನಮೂದು ಮಾಡಿ ದೃಢೀಕರಿಸತಕ್ಕದ್ದು.

ಸಿ. ಟ್ರ್ಯಾವಲರ್ಸ್ ಚೆಕ್‌ಗಳನ್ನು ನೀಡುವ ಸಂಬಂಧದಲ್ಲಿ, ಪ್ರವಾಸಿಯು ಅಧಿಕೃತ ನೌಕರನ ಸಮ್ಮುಖದಲ್ಲಿ ಚೆಕ್‌ಗಳಿಗೆ ತನ್ನ ಸಹಿ ಹಾಕತಕ್ಕದ್ದು ಮತ್ತು ಟ್ರ್ಯಾವಲರ್ಸ್ ಚೆಕ್‌ಗಳನ್ನು ಪಡೆದ ಬಗ್ಗೆ ಖರೀದಿದಾರ ಸ್ವೀಕೃತಿಯನ್ನು ಪಡೆದು ಯುಕ್ತವಾಗಿ ನಿರ್ವಹಿಸತಕ್ಕದ್ದು.

ಡಿ. ಒಬ್ಬ ಪ್ರವಾಸಿಗೆ ಮಾರಾಟ ಮಾಡುತ್ತಿರುವ ಒಟ್ಟಾರೆ ವಿದೇಶೀ ವಿನಿಮಯದಲ್ಲಿ, ವಿದೇಶಿ ಚಲಾವಣೆಯ ನೋಟುಗಳು ಮತ್ತು ನಾಣ್ಯಗಳ ರೂಪದಲ್ಲಿ ವಿದೇಶೀ ವಿನಿಮಯವನ್ನು ಕೆಳಗೆ ತಿಳಿಸಿರುವ ಮಿತಿಗಳವರೆಗೆ ಮಾರಾಟ ಮಾಡಬಹುದು.

| | | |
|---|---|---|
| (i) | ಇರಾಕ್, ಲಿಬಿಯಾ, ಇರಾನ್, ರಷಿಯಾ ಮತ್ತು ಇತರ ಸ್ವತಂತ್ರ ರಾಜ್ಯಗಳ ಕಾಮನ್ ವೆಲ್ತ್ ರಿಪಬ್ಲಿಕ್‌ಗಳನ್ನು ಹೊರತುಪಡಿಸಿ ಇತರ ದೇಶಗಳಿಗೆ ಹೋಗುತ್ತಿರುವ ಪ್ರವಾಸಿಗಳಿಗೆ | ೫೦೦ ಅಮೇರಿಕಾ ಡಾಲರ್ ಅಥವಾ ಅದಕ್ಕೆ ಸಮಾನವಾದ ಮೊತ್ತವನ್ನು ಮೀರದಷ್ಟು |
| (ii) | ಇರಾಕ್ ಮತ್ತು ಲಿಬಿಯಾಗೆ ಹೋಗುವ ಪ್ರವಾಸಿಗಳಿಗೆ | ೫೦೦೦ ಅಮೇರಿಕಾ ಡಾಲರ್ ಅಥವಾ ಅದಕ್ಕೆ ಸಮಾನವಾದ ಮೊತ್ತವನ್ನು ಮೀರದಷ್ಟು |
| (iii) | ಇರಾಕ್, ರಷಿಯಾ ಮತ್ತು ಇತರ ಸ್ವತಂತ್ರ ರಾಜ್ಯಗಳ ಕಾಮನ್ ವೆಲ್ತ್ ರಿಪಬ್ಲಿಕ್‌ಗಳನ್ನು ಹೊರತುಪಡಿಸಿ ಇತರ ದೇಶಗಳಿಗೆ ಹೋಗುತ್ತಿರುವ ಪ್ರವಾಸಿಗಳಿಗೆ | ಪೂರ್ಣ ವಿನಿಮಯ ಬಿಡುಗಡೆ |

(ಇ) ವಿದೇಶ ಪ್ರವಾಸಕ್ಕೆ ವಿದೇಶೀ ವಿನಿಮಯವನ್ನು ಮಾರಾಟ ಮಾಡುವುದಕ್ಕೆ ಸಂಬಂಧಿಸಿದ ನಮೂನೆ ಎ೨ ನ್ನು ಅಧಿಕೃತ ವ್ಯಕ್ತಿಗಳು, ತಮ್ಮ ಆಂತರಿಕ ಲೆಕ್ಕಪರಿಶೋಧಕರಿಂದ ಪರಿಶೀಲನೆಯ ಉದ್ದೇಶಕ್ಕಾಗಿ ಸಂಬಂಧಪಟ್ಟ ದಸ್ತಾವೇಜುಗಳೊಂದಿಗೆ ಒಂದು ವರ್ಷದ ಅವಧಿ ಇಟ್ಟುಕೊಂಡಿರತಕ್ಕದ್ದು.

ಎ–೩ ವಿದೇಶಕ್ಕೆ ಹೋದ ನಂತರ ಖಾಯಿಲೆ ಬಿದ್ದ ಒಬ್ಬ ವ್ಯಕ್ತಿಗೆ ಸಹ ಭಾರತದ ಹೊರಗೆ ವೈದ್ಯಕೀಯ ಚಿಕಿತ್ಸೆಗಾಗಿ ಭಾರತ ಸರ್ಕಾರದ ಅಧಿಸೂಚನೆ ಸಂಖ್ಯೆ ಜಿಎಸ್‌ಆರ್ ೩೮೧ (ಇ) ದಿನಾಂಕ ೩ನೇ ಮೇ ೨೦೦೦ ದ ನಿಯಮ ೫ರ ಅನುಸಾರ ವಿದೇಶೀ ವಿನಿಮಯವನ್ನು ಸಹ ಬಿಡುಗಡೆ ಮಾಡತಕ್ಕದ್ದು.

## ಎ–೪. ಸಾಂಸ್ಕೃತಿಕ ಪ್ರವಾಸಗಳು

ನೃತ್ಯ ತಂಡಗಳು, ಕಲಾವಿದರು ಮುಂತಾದವರು ಸಾಂಸ್ಕೃತಿಕ ಉದ್ದೇಶಗಳಿಗಾಗಿ ವಿದೇಶ ಪ್ರವಾಸ ಕೈಗೊಳ್ಳಲು ಬಯಸಿದಲ್ಲಿ ಅವರು ತಮ್ಮ ವಿದೇಶೀ ವಿನಿಮಯ ಅಗತ್ಯತೆಗಳ ಬಗ್ಗೆ ಶಿಫಾರಸುಗಳನ್ನು ಮಾಡುವುದಕ್ಕಾಗಿ ಭಾರತ ಸರ್ಕಾರದ ಮಾನವ ಸಂಪನ್ಮೂಲ ಇಲಾಖೆಯ (ಶಿಕ್ಷಣ ಮತ್ತು ಸಂಸ್ಕೃತಿ ಇಲಾಖೆ) ಮಂತ್ರಾಲಯಕ್ಕೆ ಅರ್ಜಿ ಸಲ್ಲಿಸತಕ್ಕದ್ದು. ಅಧಿಕೃತ ವ್ಯಾಪಾರಿಗಳು ಮಂತ್ರಾಲಯದ ಮಂಜೂರಾತಿಯ ಬಲದ ಮೇಲೆ, ಅದರಲ್ಲಿ ಸೂಚಿಸಿರುವಷ್ಟು ಪ್ರಮಾಣದ ವಿದೇಶೀ ವಿನಿಮಯವನ್ನು ಮತ್ತು ಅದರಲ್ಲಿ ಸೂಚಿಸಿರುವ ಷರತ್ತುಗಳಿಗೊಳಪಟ್ಟು ಬಿಡುಗಡೆ ಮಾಡಬಹುದು.

## ಎ–೫. ಖಾಸಗಿ ಭೇಟಿಗಳು

ಯಾವುದೇ ಉದ್ದೇಶಕ್ಕಾಗಿ ಭಾರತದ ಹೊರಗೆ ಪ್ರವಾಸ ಮಾಡುವುದಕ್ಕಾಗಿ ವಿದೇಶೀ ವಿನಿಮಯವನ್ನು ಬಳಸಿಕೊಳ್ಳುತ್ತಿರುವ ಒಬ್ಬ ವ್ಯಕ್ತಿಗೆ ಖಾಸಗಿ ಭೇಟಿಗಾಗಿ ಸಹಾ ವಿದೇಶೀ ವಿನಿಮಯವನ್ನು ಬಿಡುಗಡೆ ಮಾಡಬಹುದು.

## ಎ–೬. ಕೆಲವು ಪ್ರಕರಣಗಳಲ್ಲಿ ವಿದೇಶೀ ವಿನಿಮಯದ ಬಳಕೆಯ ಅನುಸರಣೆ

ಒಬ್ಬ ಅಧಿಕೃತ ವ್ಯಾಪಾರಿಯು ಅಂದಾಜುಗಳ ಆಧಾರದ ಮೇಲೆ ಉದಾಹರಣೆಗೆ ವಿದೇಶದಲ್ಲಿ ವೈದ್ಯಕೀಯ ಚಿಕಿತ್ಸೆ ಅಥವಾ ವೈದ್ಯಕೀಯ ತಪಾಸಣೆ ಮುಂತಾದವುಗಳಿಗೆ ಸಂಬಂಧಿಸಿದ ಅಂದಾಜುಗಳ ಆಧಾರದ ಮೇಲೆ ವಿದೇಶೀ ವಿನಿಮಯವನ್ನು ಬಿಡುಗಡೆ ಮಾಡಿದಲ್ಲಿ ಅಧಿಕೃತ ವ್ಯಾಪಾರಿಯು ಬಿಡದೆ ಅನುಸರಣೆ ಮಾಡಿ, ಅರ್ಜಿದಾರನು ಭಾರತಕ್ಕೆ ಹಿಂದಿರುಗಿದ ಹದಿನೈದು ದಿವಸಗಳೊಳಗೆ, ವಿದೇಶೀ ವಿನಿಮಯವನ್ನು ಬಿಡುಗಡೆ ಮಾಡಿದ ಅಧಿಕೃತ ವ್ಯಾಪಾರಿಯ ಶಾಖೆಗೆ ವಾಸ್ತವಿಕ ವೆಚ್ಚಗಳ ವಿವರಗಳನ್ನು ತಪ್ಪದೆ ಸಲ್ಲಿಸುವಂತೆ ನೋಡಿಕೊಳ್ಳತಕ್ಕದ್ದು. ಯುಕ್ತ ಸಮಯದೊಳಗೆ ವಿವರಗಳನ್ನು ಸಲ್ಲಿಸದಿರುವ ಪಕ್ಷದಲ್ಲಿ ಆ ಸಂಗತಿಯನ್ನು ಅರ್ಜಿದಾರನು ವಾಸಿಸುತ್ತಿರುವ ಪ್ರದೇಶ ಮೇಲೆ ಕಾರ್ಯವ್ಯಾಪ್ತಿ ಹೊಂದಿರುವ ರಿಸರ್ವ್ ಬ್ಯಾಂಕ್‌ನ ಪ್ರಾದೇಶಿಕ ಕಚೇರಿಗೆ ವರದಿ ಮಾಡತಕ್ಕದ್ದು.

### ಎ–೭. ವಿದೇಶೀ ವಿನಿಮಯವನ್ನು ಹಿಂದಕ್ಕೆ ಒಪ್ಪಿಸುವ ಅವಧಿ:

ಯಾವುದೇ ಉದ್ದೇಶಗಳಿಗಾಗಿ ಖರೀದಿಸಿದ ವಿದೇಶೀ ವಿನಿಮಯವನ್ನು ಆ ಉದ್ದೇಶಗಳಿಗೆ ಅಥವಾ ಎಫ್‌ಇಎಂಎ ೧೯೯೯ ಮತ್ತು ಅದರಡಿಯಲ್ಲಿ ರಚಿಸಿದ ನಿಯಮಗಳು ಅಥವಾ ವಿನಿಯಮಗಳ ಉಪಬಂಧಗಳ ಮೇರೆಗೆ ವಿದೇಶೀ ವಿನಿಮಯವನ್ನು ಖರೀದಿಸಲು ಅಥವ ಆರ್ಜಿಸಲು ಅನುಮತಿಸಲಾಗಿರುವಂಥ ಇತರ ಯಾವುದೇ ಉದ್ದೇಶಕ್ಕೆ ಬಳಸದಿದ್ದಲ್ಲಿ, ಅದನ್ನು ಅಥವಾ ಬಳಸಿರದ ಅದರ ಭಾಗವನ್ನು, ಅದನ್ನು ಖರೀದಿಸಿದ ದಿನಾಂಕದಿಂದ ೬೦ (ಅರವತ್ತು) ದಿವಸಗಳ ಅವಧಿಯೊಳಗೆ ಅಧಿಕೃತ ವ್ಯಕ್ತಿಗೆ ಹಿಂದಕ್ಕೆ ಒಪ್ಪಿಸಬೇಕಾಗುತ್ತದೆ. (ಸಿಎಫ್ ಅಧಿಸೂಚನೆ ಸಂಖ್ಯೆ ಎಫ್‌ಇಎಂಎ ೯/೨೦೦೦–ಆರ್‌ಬಿ, ದಿನಾಂಕ ೩ನೇ ಮೇ ೨೦೦೦).

ಟಿಪ್ಪಣಿ: ೬೦ ದಿವಸಗಳ ನಂತರ ವಿದೇಶೀ ವಿನಿಮಯವನ್ನು ಹಿಂದಕ್ಕೆ ಒಪ್ಪಿಸುವುದಕ್ಕಾಗಿ ಅಧಿಕೃತ ವ್ಯಾಪಾರಿಯನ್ನು ಒಬ್ಬ ವ್ಯಕ್ತಿ ಸಂಪರ್ಕಿಸುವ ಸಂದರ್ಭಗಳಲ್ಲಿ ಅಧಿಕೃತ ವ್ಯಾಪಾರಿಯು, ೬೦ ದಿವಸಗಳ ನಿರ್ದಿಷ್ಟಪಡಿಸಿದ ಅವಧಿ ಮುಕ್ತಾಯಗೊಂಡಿದೆ ಎಂಬ ಕಾರಣದ ಮೇಲೆ ವಿದೇಶೀ ವಿನಿಮಯವನ್ನು ಖರೀದಿಸಲು ನಿರಾಕರಿಸತಕ್ಕದ್ದಲ್ಲ.

### ಎ–೮ ಖರ್ಚು ಮಾಡಿರದ ವಿದೇಶೀ ವಿನಿಮಯ

ಒಬ್ಬ ಪ್ರಯಾಣಿಕನು, ಭಾರತಕ್ಕೆ ವಾಪಸ್ಸು ತಂದಂತಹ ಖರ್ಚು ಮಾಡಿರದ ವಿದೇಶೀ ವಿನಿಮಯವನ್ನು, ಖರ್ಚು ಮಾಡಿರದ ವಿದೇಶೀ ವಿನಿಮಯವು ಚಲಾವಣೆಯಲ್ಲಿರುವ ನೋಟುಗಳ ರೂಪದಲ್ಲಿದ್ದರೆ, ಪ್ರವಾಸಿಯು ವಾಪಸ್ಸು ಬಂದ ದಿನಾಂಕದಿಂದ ೯೦ ದಿವಸಗಳೊಳಗೆ ರೂಪಾಯಿಗಳಲ್ಲಿ ಹಣ ಸಂದಾಯ ಮಾಡುವುದಕ್ಕೆ ಪ್ರತಿಯಾಗಿ ಅಧಿಕೃತ ವ್ಯಕ್ತಿಗೆ ಹಿಂದಕ್ಕೆ ಒಪ್ಪಿಸತಕ್ಕದ್ದು. ಅಂಥ ವಿದೇಶೀ ವಿನಿಮಯವು ಟ್ರ್ಯಾವಲರ್ಸ್ ಚೆಕ್‌ಗಳ ರೂಪದಲ್ಲಿದ್ದರೆ, ವಾಪಸ್ಸು ಬಂದ ೧೮೦ ದಿವಸಗಳೊಳಗೆ ಆ ಚೆಕ್ಕುಗಳನ್ನು ಅಧಿಕೃತ ವ್ಯಕ್ತಿಗೆ ಹಿಂದಕ್ಕೆ ಒಪ್ಪಿಸಸತಕ್ಕದ್ದು. ಹಾಗೆ ವಾಪಸ್ಸು ತಂದಂತಹ ವಿದೇಶೀ ವಿನಿಮಯವನ್ನು ಮೇಲೆ ನಿರ್ದಿಷ್ಟ ಪಡಿಸಿದ ಅವಧಿಯೊಳಗೆ ತಾನು ವಿದೇಶಕ್ಕೆ ನೀಡುವ ತರುವಾಯದ ಭೇಟಿಗಳ ಸಂದರ್ಭದಲ್ಲಿ ಪ್ರವಾಸಿಯು ಬಳಸಿಕೊಳ್ಳಬಹುದು. ಆದರೆ, ಹಿಂದಿರುಗುತ್ತಿರುವ ಪ್ರವಾಸಿಯು, ವಿದೇಶಿ ಚಲಾವಣೆಯ ಟ್ರ್ಯಾವಲರ್ಸ್ ಚೆಕ್‌ಗಳನ್ನು ಮತ್ತು ನೋಟುಗಳನ್ನು ಒಟ್ಟು ೨೦೦೦ ಅಮೇರಿಕಾ ಡಾಲರ್‌ನಷ್ಟು ಮೊತ್ತದವರೆಗೆ ಮತ್ತು ಯಾವುದೇ ಗರಿಷ್ಠ ಮಿತಿಯಿಲ್ಲದೆ ವಿದೇಶೀ ನಾಣ್ಯಗಳನ್ನು ತನ್ನ ಬಳಿ ಉಳಿಸಿಕೊಳ್ಳುವುದಕ್ಕೂ ಸಹ ಅನುಮತಿಸಲಾಗಿದೆ (ಸಿಎಫ್ ಅಧಿಸೂಚನೆ ಸಂಖ್ಯೆ. ಎಫ್‌ಇಎಂಎ ೧೧/೨೦೦೦–ಆರ್‌ಬಿ ದಿನಾಂಕ ೩ ನೇ ಮೇ ೨೦೦೦). ಹಾಗೆ ಉಳಿಸಿಕೊಂಡ ವಿದೇಶೀ ವಿನಿಮಯವನ್ನು ತಾನು ವಿದೇಶಕ್ಕೆ ತರುವಾಯ ನೀಡುವ ಭೇಟಿಯ ಸಂದರ್ಭದಲ್ಲಿ ಬಳಸಿಕೊಳ್ಳಬಹುದು.

ಟಿಪ್ಪಣಿ: ಒಬ್ಬ ವ್ಯಕ್ತಿಯು ನಿರ್ದಿಷ್ಟ ಪಡಿಸಿದ ಅವಧಿಯ ನಂತರ ವಿದೇಶೀ ವಿನಿಮಯವನ್ನು ಹಿಂದಕ್ಕೆ ಒಪ್ಪಿಸುವುದಕ್ಕಾಗಿ ಅಧಿಕೃತ ವ್ಯಕ್ತಿಯನ್ನು ಸಂಪರ್ಕಿಸಿದಲ್ಲಿ, ಅಧಿಕೃತ ವ್ಯಕ್ತಿಯು, ನಿರ್ದಿಷ್ಟಪಡಿಸಿದ ಅವಧಿ ಮುಗಿದಿದೆ ಎಂಬ ಕಾರಣದ ಮೇಲೆ ವಿದೇಶೀ ವಿನಿಮಯವನ್ನು ಖರೀದಿಸಲು ನಿರಾಕರಿಸತಕ್ಕದ್ದಲ್ಲ.

## ಎ–೯. ಪ್ರವಾಸ ವ್ಯವಸ್ಥೆಗಳು ಮುಂತಾದವುಗಳಿಗೆ ಹಣ ರವಾನೆಗಳು

(೧) ಒಬ್ಬ ಪ್ರಯಾಣಿಕನು ಭೇಟಿ ನೀಡಲು ಉದ್ದೇಶಿಸಿರುವ ದೇಶಗಳಲ್ಲಿ ಆತನ ಹೋಟೆಲ್ ವಾಸ್ತವ್ಯ, ಪ್ರವಾಸ ವ್ಯವಸ್ಥೆಗಳು ಮುಂತಾದವುಗಳಿಗಾಗಿ ಆತನ ಬೇಡಿಕೆಯಂತೆ ಯುಕ್ತ ಮಿತಿಯವರೆಗೆ ವಿದೇಶೀ ವಿನಿಮಯವನ್ನು ಅಧಿಕೃತ ವ್ಯಾಪಾರಿಯು ರವಾನೆ ಮಾಡಬಹುದು. ಆದರೆ, ಜಾರಿಯಲ್ಲಿರುವ ನಿಯಮಗಳ, ವಿನಿಯಮಗಳ ಮತ್ತು ನಿರ್ದೇಶನಗಳ ಅನುಸಾರ ಇದು ಪ್ರಯಾಣಿಕನು ಒಬ್ಬ ಅಧಿಕೃತ ವ್ಯಕ್ತಿಯಿಂದ ಖರೀದಿಸಿದ ವಿದೇಶೀ ವಿನಿಮಯದಲ್ಲಿ (ವಿದೇಶಕ್ಕೆ ಖಾಸಗಿ ಪ್ರವಾಸಕ್ಕಾಗಿ ತೆಗೆದ ವಿದೇಶೀ ವಿನಿಮಯ ಸೇರಿದಂತೆ) ಸೇರುವುದಿಲ್ಲ.

(೨) ಅಧಿಕೃತ ವ್ಯಾಪಾರಿಗಳು ಭಾರತದ ಪ್ರವಾಸಿಗಳಿಗೆ (ಭಾರತದ ಹೋಟೆಲ್ ವಾಸ್ತವ್ಯ ಸೌಲಭ್ಯ ಕಲ್ಪಿಸುವ ಮತ್ತು ಇತರ ಪ್ರವಾಸ ವ್ಯವಸ್ಥೆಗಳನ್ನು ಮಾಡಿಕೊಡುವ ಸಂಬಂಧ ವಿದೇಶದಲ್ಲಿನ ಹೋಟೆಲ್‌ಗಳು/ ಏಜೆಂರುಗಳು ಮುಂತಾದವರೊಂದಿಗೆ ಒಪ್ಪಂದ ಮಾಡಿಕೊಂಡಿರುವಂಥ ಭಾರತದಲ್ಲಿನ ಏಜೆಂಟರುಗಳ ಕೋರಿಕೆಯಂತೆ ಹಣ ರವಾನೆ ಮಾಡಬಹುದು. ಆದರೆ, ಅಧಿಕೃತ ವ್ಯಾಪಾರಿಯು, ಜಾರಿಯಲ್ಲಿರುವ ನಿಯಮಗಳು, ವಿನಿಯಮಗಳು ಮತ್ತು ನಿರ್ದೇಶನಗಳ ಅನುಸಾರವಾಗಿ ಅಧಿಕೃತ ವ್ಯಕ್ತಿಯಿಂದ ಸಂಬಂಧಪಟ್ಟ ಪ್ರಯಾಣಿಕನು ಖರೀದಿಸಿದ ವಿದೇಶೀ ವಿನಿಮಯದಿಂದ (ವಿದೇಶಕ್ಕೆ ಖಾಸಗಿ ಪ್ರಯಾಣ ಮಾಡಲು ತೆಗೆದ ವಿದೇಶೀ ವಿನಿಮಯವೂ ಸೇರಿದಂತೆ) ಹಣ ರವಾನೆ ಮಾಡಲಾಗುತ್ತಿದೆ ಎಂಬುದನ್ನು ಮನವರಿಕೆ ಮಾಡಿಕೊಳ್ಳಬೇಕು.

(೩) ಅಧಿಕೃತ ವ್ಯಾಪಾರಿಯು ಭಾರತದ ಪ್ರಯಾಣಿಕರಿಗೆ ಹೋಟೆಲ್ ವಾಸ್ತವ್ಯ ಸೌಲಭ್ಯ ಕಲ್ಪಿಸುವ ಮತ್ತು ಇತರ ಪ್ರವಾಸ ವ್ಯವಸ್ಥೆಗಳನ್ನು ಮಾಡಿಕೊಡುವ ಸಂಬಂಧ ವಿದೇಶದಲ್ಲಿನ ಹೋಟೆಲುಗಳು/ ಏಜೆಂಟರುಗಳು ಮುಂತಾದವರೊಂದಿಗೆ ಒಪ್ಪಂದ ಮಾಡಿಕೊಂಡಿರುವಂಥ ಏಜೆಂಟರುಗಳ ಹೆಸರಿನಲ್ಲಿ ವಿದೇಶೀ ಕರೆನ್ಸಿ ಖಾತೆಗಳನ್ನು ತೆರೆಯಬಹುದು, ಆದರೆ

(ಎ) ಖಾತೆಗೆ ಮಾಡುವ ಜಮೆಗಳನ್ನು,

(ಖ) ಪ್ರವಾಸಿಗರಿಂದ ವಿದೇಶೀ ವಿನಿಮಯದಲ್ಲಿ ಮಾಡಿದ ಸಂಗ್ರಹಣೆಗಳನ್ನು ಮತ್ತು

(ಖಖ) ಬುಕಿಂಗ್‌ಗಳು/ ಪ್ರವಾಸ ವ್ಯವಸ್ಥೆಗಳು ಮುಂತಾದವುಗಳನ್ನು ರದ್ದುಪಡಿಸಿದ ಕಾರಣದಿಂದಾಗಿ ಭಾರತದ ಹೊರಗಿನಿಂದ ಪಡೆದ ಮರು ಪಾವತಿಗಳನ್ನು ಶೇವಣಿ ಮಾಡುವ ರೂಪದಲ್ಲಿ ಮಾಡತಕ್ಕದ್ದು.

(ಬಿ) ವಿದೇಶೀ ವಿನಿಮಯಕ್ಕೆ ಹಾಕುವ ಖರ್ಚುಗಳು ಮೇಲಿನ (೨) ರ ಅನುಸಾರವಾಗಿ ಭಾರತದ ಹೊರಗೆ ಹೋಟೆಲ್ ವಾಸ್ತವ್ಯ ಸೌಲಭ್ಯ, ಪ್ರವಾಸ ವ್ಯವಸ್ಥೆಗಳು ಮುಂತಾದವುಗಳಿಗೆ ಹಣ ಸಂದಾಯಗಳನ್ನು ಮಾಡುವುದಕ್ಕೆ ಸಂಬಂಧಿಸಿದವುಗಳಾಗಿರುತ್ತವೆ.

## ಎ–೧೦. ರೂಪಾಯಿಗಳಲ್ಲಿ ಹಣ ಸಂದಾಯ

ಅಧಿಕೃತ ವ್ಯಾಪಾರಿಗಳು ವಿದೇಶ ಪ್ರವಾಸಕ್ಕಾಗಿ (ಖಾಸಗಿ ಭೇಟಿಗೆ ಅಥವಾ ಯಾವುದೇ ಇತರ ಉದ್ದೇಶಕ್ಕೆ) ವಿದೇಶೀ ವಿನಿಮಯವನ್ನು ಮಾರಾಟ ಮಾಡುವುದಕ್ಕೆ ಪ್ರತಿಯಾಗಿ ೫೦,೦೦೦ ರೂಪಾಯಿಗಳ (ಐವತ್ತು ಸಾವಿರ ರೂಪಾಯಿಗಳು ಮಾತ್ರ) ವರೆಗೆ ನಗದು ಸಂದಾಯವನ್ನು ಅಂಗೀಕರಿಸಬಹುದು. ವಿದೇಶೀ ವಿನಿಮಯದ ಮಾರಾಟವು ೫೦,೦೦೦ ರೂಪಾಯಿಗಳಿಗೆ ಸಮನಾದ ಮೊಬಲಗನ್ನು ಮೀರಿದಲ್ಲಿ ಹಣ ಸಂದಾಯವನ್ನು (೧) ಅರ್ಜಿದಾರನ ಬ್ಯಾಂಕ್ ಖಾತೆಗೆ ನೀಡಿದ ಕ್ರಾಸು ಮಾಡಿದ ಚೆಕ್ ಅಥವಾ (೨) ಅರ್ಜಿದಾರನ ಭೇಟಿಯನ್ನು ಪ್ರಾಯೋಜಿಸುತ್ತಿರುವ ಫರ್ಮ್‌ನ/ ಕಂಪನಿಯ ಬ್ಯಾಂಕ್ ಖಾತೆಗೆ ನೀಡಿದ ಕ್ರಾಸು ಮಾಡಿದ ಚೆಕ್ ಅಥವಾ (೩) ಬ್ಯಾಂಕರ್ಸ್ ಚೆಕ್ / ಪೇ ಆರ್ಡ್‌ರ್/ ಡಿಮ್ಯಾಂಡ್ ಡ್ರಾಫ್ಟ್ ಮೂಲಕ ಮಾತ್ರ ಪಡೆಯತಕ್ಕದ್ದು.

ಟಿಪ್ಪಣಿ: ತೆಗೆದ ವಿದೇಶೀ ವಿನಿಮಯಕ್ಕೆ ಸಮನಾದ ತೆಗೆದು ರೂಪಾಯಿಯನ್ನು ಯಾವುದೇ ಒಂದು ಬಾರಿ ತೆಗೆದ ಅಥವಾ ಒಂದೇ ಪ್ರವಾಸಕ್ಕೆ ಭೇಟಿಗೆ ಒಟ್ಟಿಗೆ ಲೆಕ್ಕಹಾಕಲಾದ ಒಂದಕ್ಕಿಂತ ಹೆಚ್ಚು ಬಾರಿ ತೆಗೆದ ಸಂಬಂಧದಲ್ಲಿ ೫೦,೦೦೦ ರೂಪಾಯಿಗಳನ್ನು ಮೀರಿದ ಪಕ್ಷದಲ್ಲಿ, ಅದನ್ನು ಮೇಲೆ ವಿವರಿಸಿದಂತೆ ಚೆಕ್ ಅಥವಾ ಡಿಮ್ಯಾಂಡ್ ಡ್ರಾಪ್ಟ್ ಮೂಲಕ ಸಂದಾಯ ಮಾಡತಕ್ಕದ್ದು.